No. of Printed Pages : **5**

# 5904

Register Number

# Language - Part I - KANNADA

Time Allowed : 3.00 Hours ] [ Maximum Marks : 90

**ಸೂಚನೆಗಳು :** (1) ಪ್ರಶ್ನೆ ಪತ್ರಿಕೆಯ ಮುದ್ರಣ ಸ್ಪಷ್ಟವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ಪಷ್ಟತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.

(2) ಬರೆಯಲು ಮತ್ತು ಅಡ್ಡಗೆರೆ ಎಳೆಯಲು ನೀಲಿ ಅಥವಾ ಕಪ್ಪು ಶಾಹಿಯನ್ನು ಬಳಸಿರಿ ಹಾಗೂ ಆಕೃತಿಗಳನ್ನು ರಚಿಸಲು ಪೆನ್ಸಿಲ್ ಬಳಸಿರಿ.

## ಭಾಗ - I/PART - I

**ಸರಿಯಾದ** ಉತ್ತರವನ್ನು ಆರಿಸಿ ಬರೆಯಿರಿ. **14x1=14**

Choose and write the **correct** answer.

**1.** ವ್ಯಾಸ, ವಾಲ್ಮೀಕಿಯು ಭಾರತದ ಯಾವ ಭಾಗದವರು ?

(ಅ) ಬಡಗಣ (ಆ) ಮೂಡಣ (ಇ) ತೆಂಕಣ (ಈ) ಪಡುವಣ

**2.** 'ಇಂಗ್ಲೀಷ್ ಗೀತೆಗಳು' ಎಂಬುದು ಯಾರ ಕವನ ಸಂಕಲನ ?

(ಅ) ರಂ.ಶ್ರೀ. (ಆ) ಬಿ.ಎಂ.ಶ್ರೀ. (ಇ) ಕಾವ್ಯಶ್ರೀ (ಈ) ತೀ.ನಂ.ಶ್ರೀ.

**3.** ನಾಮಪದದ ಮೂಲ ರೂಪವನ್ನು ಏನೆಂದು ಕರೆಯುವರು ?

(ಅ) ಪದ (ಆ) ವಚನ (ಇ) ಪ್ರತ್ಯಯ (ಈ) ನಾಮಪ್ರಕೃತಿ

**4.** 'ಭಾರತೀಯ ಕಾವ್ಯ ಮೀಮಾಂಸೆ' ಎಂಬುದು ಯಾರ ಕೃತಿ ?

(ಅ) ರಂ.ಶ್ರೀ. (ಆ) ಬಸವಪ್ಪ ಶಾಸ್ತ್ರೀ (ಇ) ತೀ.ನಂ.ಶ್ರೀ. (ಈ) ಬಿ.ಎಂ.ಶ್ರೀ.

**5.** 'ಭಾರತಿ' ಎಂಬುದು ಯಾರ ಕಾವ್ಯನಾಮವಾಗಿದೆ ?

(ಅ) ತ್ರಿವೇಣಿ (ಆ) ಅಕ್ಕಮಹಾದೇವಿ (ಇ) ತಿರುಮಲೆ ರಾಜಮ್ಮ (ಈ) ಎಂ.ಕೆ. ಇಂದಿರಾ

**6.** ವಿದ್ಯಾರ್ಥಿಗೆ – ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ ಯಾವುದು ?

(ಅ) ತೃತೀಯಾ (ಆ) ಪ್ರಥಮಾ (ಇ) ಚತುರ್ಥಿ (ಈ) ದ್ವಿತೀಯಾ

[ Turn over

https://www.tamilnaduboard.com

7. 'ಗುಹೇಶ್ವರ' ಎಂಬುದು ಯಾರ ವಚನಗಳ ಅಂಕಿತ ?
(ಅ) ಸಿದ್ಧರಾಮ (ಆ) ಅಲ್ಲಮಪ್ರಭು (ಇ) ದಾಸಿಮಯ್ಯ (ಈ) ಬಸವಣ್ಣ

8. 'ಏಕೈಕ' – ಎಂಬುದು ಯಾವ ಸಂಧಿಗೆ ಉದಾಹರಣೆಯಾಗಿದೆ ?
(ಅ) ಯಣ್ ಸಂಧಿ (ಆ) ಗುಣ ಸಂಧಿ (ಇ) ಅನುನಾಸಿಕ ಸಂಧಿ (ಈ) ವೃದ್ಧಿ ಸಂಧಿ

9. 'ಕುಸುಮಬಾಲೆ' ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದ ಸಾಹಿತಿ ಯಾರು ?
(ಅ) ಡಾ॥ ತಮಿಳ್ ಸೆಲ್ವಿ (ಆ) ಸಿದ್ಧಲಿಂಗಯ್ಯ
(ಇ) ದೇವನೂರು ಮಹಾದೇವ (ಈ) ಎಂ.ಎಸ್. ಸುಂಕಾಪುರ

10. ಲಘು ಮೂರಿದ್ದರೆ ಯಾವ ಗಣ ಬರುತ್ತದೆ ?
(ಅ) ನಗಣ (ಆ) ಮಗಣ (ಇ) ರಗಣ (ಈ) ತಗಣ

11. 'ಽ' – ಈ ಚಿಹ್ನೆಯನ್ನು ಛಂದಸ್ಸಿನಲ್ಲಿ ಏನೆಂದು ಕರೆಯಲಾಗುತ್ತದೆ ?
(ಅ) ಲಘು (ಆ) ಪ್ಲುತ (ಇ) ಗುರು (ಈ) ಗಣ

12. ಪುರಂದರದಾಸರಿಗಿದ್ದ ಬಿರುದು ಯಾವುದು ?
(ಅ) ಉಪಮಾಲೋಲ (ಆ) ನಾಡೋಜ
(ಇ) ಕರ್ನಾಟಕ ರತ್ನ (ಈ) ಕರ್ನಾಟಕ ಸಂಗೀತ ಪಿತಾಮಹ

13. ಶಬ್ದಾಲಂಕಾರದಲ್ಲಿರುವ ಮುಖ್ಯ ವಿಧಗಳು __________.
(ಅ) ನಾಲ್ಕು (ಆ) ಎರಡು (ಇ) ಆರು (ಈ) ಮೂರು

14. 'ದ್ರಾವಿಡ ಭಾಷೆಗಳ ಅಧ್ಯಯನದ ಪಿತಾಮಹ' ಯಾರು ?
(ಅ) ಕಾಲ್ಡ್‌ವೆಲ್ (ಆ) ಕಿಟೆಲ್
(ಇ) ತೀ.ನಂ. ಶ್ರೀಕಂಠಯ್ಯ (ಈ) ಬಿ.ಎಲ್. ರೈಸ್

## ಭಾಗ - II/PART - II
### ವಿಭಾಗ - 1/SECTION - 1

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 3 ಕ್ಕೆ** ಮಾತ್ರ **ಒಂದೆರಡು** ವಾಕ್ಯಗಳಲ್ಲಿ ಉತ್ತರಿಸಿರಿ. **3x2=6**
Answer **any 3** of the following questions in **one** or **two** sentence each.

15. ಮಾದೇವನ ಶಿಶುಮಕ್ಕಳ ಹೆಸರೇನು ?

16. ಅಂಬಿಗನು ಕರೆದೊಯ್ಯಬೇಕಾದದ್ದು ಎಲ್ಲಿಗೆ ?

17. ಮಗಳನ್ನು ನೋಡಿ ಕಾರಿ ಹೆಗ್ಗಡೆ ಏನೆಂದನು ?

18. ಭಾರತದ ಸಮುದ್ರ ತೀರವು ಹೇಗೆ ಕಂಗೊಳಿಸುತ್ತದೆ ?

https://www.tamilnaduboard.com

## ವಿಭಾಗ - 2/SECTION - 2

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 2 ಕ್ಕೆ** ಮಾತ್ರ ಉತ್ತರ ಬರೆಯಿರಿ. **2x2=4**

Answer **any 2** of the following questions.

**19.** ಪಟೇಲರು ತಮ್ಮಟೆ ಬಡಿಸಿ ಊರಲ್ಲಿ ಏನೆಂದು ಸಾರಿಸಿದರು ?

**20.** ಸುಖ–ದುಃಖಗಳ ಮೂಲ ಯಾವುದು ?

**21.** ಸಾವಿತ್ರಿಯು ಗಂಡನೊಡನೆ ಎಲ್ಲಿಗೆ ಹೊರಟಳು ?

## ವಿಭಾಗ - 3/SECTION - 3

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 7 ಕ್ಕೆ** ಮಾತ್ರ ಉತ್ತರ ಬರೆಯಿರಿ. **7x2=14**

Answer **any 7** of the following questions.

**22.** ಮಹೋತ್ಸವ, ಮಹಾರಣ್ಯ – ಈ ಪದಗಳನ್ನು ಬಿಡಿಸಿ ಬರೆದು ಸಂಧಿ ತಿಳಿಸಿರಿ.

**23.** ಪಶ್ಚಾತ್ತಾಪ, ಪ್ರಾರ್ಥನೆ – ಈ ಪದಗಳಿಗೆ ಸ್ವಂತವಾಕ್ಯ ರಚಿಸಿರಿ.

**24.** ಹೊಂದಿಸಿ ಬರೆಯಿರಿ.

(ಅ) ಪಾಣಿನಿ – ಮದ್ರಾಸಿ

(ಆ) ರವೀಂದ್ರ – ಉಜ್ಜಯಿನಿ

(ಇ) ಕಾಳಿದಾಸ – ಪಶ್ಚಿಮದವರು

(ಈ) ವಳ್ಳುವರ್ – ಪೂರ್ವದವರು

**25.** ಯಮ್ಕ, ಯಾಸ – ಈ ಪದಗಳ ಗ್ರಾಂಥಿಕ ರೂಪ ಬರೆಯಿರಿ.

**26.** ಅಟವಿ, ಶರ್ಕರಾ – ಈ ಪದಗಳಿಗೆ ತದ್ಭವ ಪದ ಬರೆಯಿರಿ.

**27.** ಪರಿಮಿತ, ಹಗುರ – ಈ ಪದಗಳಿಗೆ ವಿರುದ್ಧ ಪದ ಬರೆಯಿರಿ.

**28.** ವನವಾಸ, ಕಣ್ದೆರೆ – ಈ ಪದಗಳ ವಿಗ್ರಹ ವಾಕ್ಯ ಬರೆದು ಸಮಾಸ ತಿಳಿಸಿರಿ.

**29.** 'ನೀರೊಳದ್ದನೊ ಮರದ ಕೊಂಬೇರಿ ಬಿದ್ದನೋ ಫಣಿ ತಿಂದುದೋ' – ಈ ಸಾಲಿಗೆ ಪ್ರಸ್ತಾರ ಹಾಕಿರಿ.

**30.** ಯಾವುದಾದರೂ ಎರಡು ಷಟ್ಪದಿಗಳ ಹೆಸರು ಬರೆಯಿರಿ.

[ Turn over

https://www.tamilnaduboard.com

## ಭಾಗ - III/PART - III

### ವಿಭಾಗ - 1/SECTION - 1

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 2** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **2x4=8**

Answer **any 2** of the following questions in brief.

**31.** ಕೂಡಲ ಸಂಗಮದೇವ ಯಾರನ್ನು ಮೆಚ್ಚುವುದಿಲ್ಲ ಎಂದು ಬಸವಣ್ಣನವರು ಹೇಳುತ್ತಾರೆ ?

**32.** ಮಾದೇವ ಶಿಷ್ಯರನ್ನು ಹೇಗೆ ಸಲುಹಿದನು ? ವಿವರಿಸಿ.

**33.** ಗೌಡ ತೊರೆಯನ ಬಳಿ ಏನೆಂದು ಕೇಳಿಕೊಂಡನು ? ಅದಕ್ಕೆ ತೊರೆಯನು ಹೇಳಿದ ಆಶ್ವಾಸನೆಯ ಮಾತುಗಳೇನು ?

**34.** ಅಂಬಿಗನು ದಾಟಿಸಬೇಕಾದ ಹೊಳೆಯ ಸ್ವರೂಪವನ್ನು ತಿಳಿಸಿರಿ.

### ವಿಭಾಗ - 2/SECTION - 2

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 2** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **2x4=8**

Answer **any 2** of the following questions in brief.

**35.** ಅಳು–ನಗು ಎರಡೂ ಪರಸ್ಪರ ವಿರುದ್ಧವಾದವು. ಹೇಗೆ ?

**36.** ಪಟೇಲರ ಮೇಲೆ ಜನರು ಹೊರಿಸಿದ ಆರೋಪ ಯಾವುದು ?

**37.** ತಾನು ಪತಿವ್ರತೆ ಎಂಬುದನ್ನು ಸಾವಿತ್ರಿ ಹೇಗೆ ಸಮರ್ಥಿಸಿಕೊಂಡಳು ?

**38.** ಕಾಡಿನಲ್ಲಿ ಹುಲಿಗಳೆಲ್ಲ ದಿಕ್ಕಾಪಾಲಾಗಿ ಓಡಿಹೋದದ್ದೇಕೆ ?

### ವಿಭಾಗ - 3/SECTION - 3

ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 3** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **3x4=12**

Answer **any 3** of the following questions in brief.

**39.** ಕನ್ನಡ ಭಾಷೆಯು ಸಂಸ್ಕೃತದಿಂದ ಜನಿಸಿದ್ದು ಎಂದು ಭಾವಿಸಲು ಕಾರಣವೇನು ?

**40.** ರೂಢನಾಮ ಹಾಗೂ ಅಂಕಿತನಾಮವನ್ನು ವಿವರಿಸಿ, ಉದಾಹರಣೆ ನೀಡಿರಿ.

**41.** 'ಮಗುವಿನ ಕರೆ' – ತಾಯಿಯಲ್ಲಿ ಜೀವನ ಪ್ರೀತಿಯನ್ನು ಹೇಗೆ ಮೂಡಿಸಿತು ?

**42.** ಕಂದ ಪದ್ಯದ ಲಕ್ಷಣ ಬರೆದು ಉದಾಹರಣೆ ನೀಡಿರಿ.

**43.** 'ಶಕ್ತಿಗಿಂತ ಯುಕ್ತಿ ಮೇಲು', 'ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ ?' – ಈ ಗಾದೆ ಮಾತುಗಳನ್ನು ಸಂಕ್ಷಿಪ್ತವಾಗಿ ವಿಸ್ತರಿಸಿ.

https://www.tamilnaduboard.com

## ಭಾಗ - IV/PART - IV

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **3x6=18**

Answer the following questions.

**44.** (a) ಪ್ರೀತಿಯ ನಡುವೆ, ಬಡವ-ಬಲ್ಲಿದ, ಜಾತಿ-ಮತ ಯಾವುದೂ ಅಡ್ಡಬಾರದು ಎಂಬುದನ್ನು ಕಾರಿ ಹೆಗ್ಗಡೆಯ ಮಗಳು ಎಂಬ ಕಥನ ಕವನದ ಮೂಲಕ ಸಮರ್ಥಿಸಿ.

ಅಥವಾ

(b) ಭರತ ಭೂಮಿಯ ವರಪುತ್ರನಾಗಬಯಸುವವನು ಹೇಗೆ ಬೆಳೆದು ಬಾಳಬೇಕು ? ವಿವರಿಸಿ.

**45.** (a) ಭಾಗೀರಥಿ ಹೇಗೆ ಕೆರೆಗೆ ಹಾರವಾದಳು ? ವಿವರಿಸಿ.

ಅಥವಾ

(b) ಹುಲಿಯಿಂದ ನಾಪಿತ ಹಾಗೂ ನಾಪಿತನಿಂದ ಹುಲಿಯು ಪಾರಾದ ರೀತಿಯನ್ನು ನಿರೂಪಿಸಿ.

**46.** (a) ಹೂವಾದ ಹುಡುಗಿಯ ಕಥೆ ಬರೆಯಿರಿ.

ಅಥವಾ

(b) ಮಗುವನ್ನು ಕದ್ದು ತಂದ ಪ್ರಸಂಗವನ್ನು, ಅದರ ಪರಿಣಾಮವನ್ನು ವಿವರಿಸಿ.

## ಭಾಗ - V/PART - V

ಕೆಳಗಿನ ಪದ್ಯಭಾಗಗಳನ್ನು ಪೂರ್ತಿಗೊಳಿಸಿರಿ. **3+3=6**

Fill up the lines of following Poems.

**47.** (a) ಸಾರ ಸಜ್ಜನರ ಸಂಗ ....................................

..................................................................

..................................................................

................................ ಕೂಡಲ ಸಂಗನ ಶರಣ.

(b) ಆರು ತೆರೆಯ ...............................................

..................................................................

..................................................................

...................................................... ಅಂಬಿಗ.

- o O o -

https://www.tamilnaduboard.com